**ಓ ಎಸ್ ನಂಃ 329/2020**

**ಪಿ. ಡಬ್ಲ್ಯೂ ಃ 4**

**ದಿಃ 03.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎಂ ಜಿ ಆರ್ ವಕೀಲರಿಂದ ಃ ನಾನು**

ಬಿ.ಎ., ಟಿ ಸಿ ಹೆಚ್ ಪದವೀಧರನಾಗಿರುತ್ತೇನೆ. ನಾನು ಪ್ರಾಸಾ 2 ರವರ ತಂದೆ ಬಿ ಆರ್ ಆಂಜನಪ್ಪ ಸ್ನೇಹಿತರು ಎಂದರೆ ನನಗೆ ಅವರ ಪರಿಚಯ ಇರುತ್ತದೆ ಎಂದು ನುಡಿಯುತ್ತಾರೆ. ಪ್ರಾಸಾ 2 ಮತ್ತು ನನಗೆ ವೈಯಕ್ತಿಕವಾದ ಪರಿಚಯ ಇರುವುದಿಲ್ಲ. ಸಾಕ್ಷಿಗೆ ಈ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ದಾಖಲಾತಿಯನ್ನು ನೋಡಿ ಪರಿಶೀಲಿಸಿ ಸದರಿ ದಾಖಲಾತಿ ಪ್ರಾಸಾ 2 ರವರು ಯಾರಿಗೋ ಅವರ ಸ್ವತ್ತನ್ನು ಮಾರಾಟ ಮಾಡಿರುವ ದಾಖಲಾತಿ ಎಂದು **ಹೇಳಿದ್ದು ಸದರಿ ದಾಖಲಾತಿಯನ್ನು ನಿ ಡಿ 19 ಎಂದು ಗುರುತಿಸಲಾಯಿತು.**

ದಿನಾಂಕ ಃ 25.11.2006 ರಂದು ಮೃತ ಕೃಷ್ಣಪ್ಪ ನವರ ತಂದೆ ರಾಮಯ್ಯ ನವರು ವಿಲುನಾಮೆ ನೋಂದಣಿಯಾಗಿತ್ತು ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಸಾಕ್ಷಿ ಸದರಿ ವಿಲುನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ವಿಲುನಾಮೆಯನ್ನು **ಗುರುತಿಸಿದ್ದು ಸದರಿ ವಿಲ್ ನಲ್ಲಿ ಅವರ ಸಹಿ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ವಿಲ್ ನ ದೃಢೀಕೃತ ನಕಲನ್ನು ಈಗ ನಿ ಡಿ 20 ಎಂದು ಗುರುತಿಸಲಾಯಿತು. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಿಡಿ 20 ರ ಬಗ್ಗೆ ಹೇಳಿರುವುದಿಲ್ಲವೆಂದರೆ ಸರಿ. ದಿನಾಂಕ ಃ 25.11.2006 ರಂದು ಕೆಂಗೇರಿ ಉಪ ನೋಂದಾಣಾಧಿಕಾರಿಗಳ ಕಚೇರಿಗೆ ಹೋಗಿದ್ದು, ಅಲ್ಲಿ ಕೃಷ್ಣಪ್ಪ ನವರು ಅವರು ವಿಲ್ ಮಾಡಿರುವುದಾಗಿ ಹೇಳಿದ್ದು, ನಾನು ಸದರಿ ವಿಲ್ ನಲ್ಲಿ ಕೃಷ್ಣಪ್ಪ ನವರ ಸಹಿಯನ್ನು ಗುರುತಿಸುತ್ತೇನೆ. ನಾನು ಅಲ್ಲಿಗೆ ಹೋದಾಗ ಕೃಷ್ಣಪ್ಪ ನವರನ್ನು ಗುರುತಿಸಿ ಸಾಕ್ಷಿ ಹಾಕುವುದನ್ನು ಮಾತ್ರ ಮಾಡಿರುತ್ತೇನೆ. ಸದರಿ ವಿಲ್ ನ ಬಗ್ಗೆ ನನಗೆ ವೈಯಕ್ತಿಕವಾಗಿ ಏನು ಗೊತ್ತಿರುವುದಿಲ್ಲ.**

ದಿನಾಂಕಃ 3.12.2008 ರಲ್ಲಿ ಕೃಷ್ಣಪ್ಪ ನವರು ಮತ್ತೊಂದು ವಿಲ್ ನ್ನು ನೋಂದಣಿ ಮಾಡಿರುತ್ತಾರೆ. ಅದಕ್ಕೆ ಕೂಡ ನನ್ನ ಸಹಿ ಹಾಕಲು ದೂರವಾಣಿ ಮುಖಾಂತರ ಕೃಷ್ಣಪ್ಪ ನವರು ಕರೆದಿದ್ದರು. ಎಷ್ಟು ಸಮಯದಲ್ಲಿ ಕರೆದಿದ್ದರು ಎಂದು ನನಗೆ ನೆನಪಿಲ್ಲ. ನನ್ನ ಹತ್ತಿರ ಕೃಷ್ಣಪ್ಪ ನವರು ಕರೆ ಮಾಡಿದ್ದರು ಎಂದು ಹೇಳಲು ಯಾವುದೆ ದಾಖಲಾತಿಗಳು ಇರುವುದಿಲ್ಲ. ದಿನಾಂಕ ಃ 03.12.2008 ರ ವಿಲ್ ತಯಾರಿ ಮಾಡಿದಾಗ ನಾನು ಖುದ್ದಾಗಿ ಹಾಜರಿದ್ದೇನು ಎಂದರೆ ಸಾಕ್ಷಿಯು ನಾನು ಅಲ್ಲಿಗೆ

ಹೋದಾಗ ವಿಲ್ ನ್ನು ತಯಾರು ಮಾಡಲಾಗಿತ್ತು. ನಾನು ಕೃಷ್ಣಪ್ಪ ನವರನ್ನು ಮಾತ್ರ ಗುರುತಿಸಿರುತ್ತೇನೆ. ನಾನು ಸದರಿ ವಿಲ್ ನಲ್ಲಿ ಕೃಷ್ಣಪ್ಪ ನವರ ಹೆಬ್ಬೆಟ್ಟನ್ನು ಮಾತ್ರ ಗುರುತಿಸಿರುತ್ತೇನೆ. ಬಾಕಿ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನಾನು ಆ ದಿನ ಉಪನೋಂದಾಣಾಧಿಕಾರಿಗಳ ಕಚೇರಿಗೆ ಎಷ್ಟು ಸಮಯಕ್ಕೆ ಬಂದಿರುತ್ತೇನೆ ಎಂದು ಸರಿಯಾಗಿ ನೆನಪಿಲ್ಲ. ಮಧ್ಯಾಹ್ನದ ಸಮಯಕ್ಕೆ ಬಂದಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ದಿನ ನಾನು ಕೃಷ್ಣಪ್ಪನವರನ್ನು ವಿಲ್ ಬಗ್ಗೆ ಮಾತ್ರ ಗುರುತಿಸಿರುತ್ತೇನೆ. ಇನ್ನು ಉಳಿದ ಯಾವುದೆ ಆ ವಿಲ್ ನ ಸಾಕ್ಷಿಗಳ ಬಗ್ಗೆ **ನನಗೆ** ಗೊತ್ತಿರುವುದಿಲ್ಲ. ನನಗೆ ಉಪ ನೋಂದಾಣಾಧಿಕಾರಿಗಳು ಆ ದಿನ ಕೃಷ್ಣಪ್ಪ ನವರಿಗೆ ವಿಲ್ ನಲ್ಲಿ ಬರೆದಿರುವ ವಿಚಾರದ ಬಗ್ಗೆ ಯಾವುದೆ ಪ್ರಶ್ನೆ ಆ ದಿನ ಮಾಡಿರುವುದಿಲ್ಲ.

ಕೃಷ್ಣಪ್ಪ ನವರು ಕಿವುಡರು ಎಂದು ಮಾಸಾಶನ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಕೃಷ್ಣಪ್ಪನವರಿಗೆ ಉಪ ನೋಂದಾಣಾಧಿಕಾರಿಗಳು ಸನ್ನೆ ಭಾಷೆಯಲ್ಲಿ ವಿಲ್ ಮಾಡಿರುತ್ತಾರಾ ಎಂದು ಕೇಳಿರುತ್ತಾರಾ ಎಂದರೆ ಸಾಕ್ಷಿಯು ಆ ದಿನ ಉಪ ನೋಂದಾಣಾಧಿಕಾರಿಗಳು ನೇರವಾಗಿ ಕೃಷ್ಣಪ್ಪ ನವರಿಗೆ ವಿಲ್ ಮಾಡಿರುತ್ತಿರಾ ಎಂದು ಕೇಳಿದ್ದು, ಕೃಷ್ಣಪ್ಪ ನವರು ಆ ದಿನ ಉಪ ನೋಂದಾಣಾಧಿಕಾರಿಗಳಿಗೆ ನಾನು ವಿಲ್ ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. ಸದರಿ ವಿಷಯದ ಬಗ್ಗೆ ಉಪ ನೋಂದಾಣಾಧಿಕಾರಿಗಳು ನೋಂದಣಿಯಾಗುವ ಸಮಯದಲ್ಲಿ ಯಾವುದೆ ಹಿಂಬರಹವನ್ನು ಮಾಡಿರುವುದಿಲ್ಲ. ವಿಲ್ ನ ಛಾಪಾ ಕಾಗದ ಮತ್ತು ಅದರ ಖರ್ಚು ವೆಚ್ಚಗಳ ಬಗ್ಗೆ ನನಗೆ ಯಾವುದೆ ಮಾಹಿತಿ ಇರುವುದಿಲ್ಲ.

ನನಗೆ ವಿಲ್ ನಲ್ಲಿರುವ ಸ.ನಂ. ಗಳು, ವಿಸ್ತೀರ್ಣ ಮತ್ತು ಚೆಕ್ ಬಂದಿಯ ಬಗ್ಗೆ ಗೊತ್ತಿರುವುದಿಲ್ಲ. ಸದರಿ ವಿಲ್ ನ್ನು ಯಾವ ವಕೀಲರ ಹತ್ತಿರ ತಯಾರು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ, ಆದರೆ ಸದರಿ ವಿಲ್ ನ್ನು ಶಂಕರೇಗೌಡರು ತಯಾರು ಮಾಡಿರುತ್ತಾರೆ. ಶಂಕರೇಗೌಡರು ತಯಾರು ಮಾಡುವಾಗ ನಾನು ಹಾಜರಿದ್ದೆ. ಸದರಿ ವಿಲ್ ಎಷ್ಟು ಗಂಟೆಗೆ ತಯಾರಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ, ಮಧ್ಯಾಹ್ನ ಆಗಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ಶಂಕರೇಗೌಡರು ವಿಲ್ ತಯಾರುಮಾಡುವಾಗ ನಾನು ಇದ್ದೇನೆ ಎಂದರೆ ಸಾಕ್ಷಿಯು ಶಂಕರೇಗೌಡರು ವಿಲ್ ತಯಾರುಮಾಡಿದ ನಂತರ ಟೈಪ್ ಮಾಡಿದ ನಂತರ ನಾನು ಕೃಷ್ಣಪ್ಪನವರ ಹೆಬ್ಬೆಟ್ಟಿನ ಸಹಿಯನ್ನು ಗುರುತಿಸಿ ನಂತರ ನೋಂದಣಿ ಆಗುವ ಸಮಯದಲ್ಲಿ ಕೃಷ್ಣಪ್ಪ ನವರ ಹೆಬ್ಬೆಟ್ಟಿನ ಸಹಿಯನ್ನು ಗುರುತಿಸಿರುತ್ತೇನೆ. ಶಂಕರೇಗೌಡರವರ ಕಚೇರಿ ಎಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಶಂಕರೇಗೌಡರು ಡ್ರಾಫ್ಟ್ ಮಾಡುವಾಗ ನಾನು ಇದ್ದೇನೆ ಎಂದರೆ ಸಾಕ್ಷಿಯು ಶಂಕರೇಗೌಡರು ವಿಲ್ ತಯಾರು ಮಾಡುವಾಗ ನಾನು ಅಲ್ಲೇ ಇದ್ದೆ ಎಂದು ನುಡಿಯುತ್ತಾರೆ. ಶಂಕರೇಗೌಡರಿಗೆ ವಿಲ್ ನಲ್ಲಿರುವ ವಿಷಯಗಳನ್ನು ಕೃಷ್ಣಪ್ಪನವರು ಹೇಳಿರುತ್ತಾರೆ. ಶಂಕರಪ್ಪನವರು ಕೃಷ್ಣಪ್ಪ ನವರು ಹೇಳಿದ ವಿಷಯವನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಂಡಿದ್ದರು. ಸದರಿ ಬಿಳಿ ಹಾಳೆಯಲ್ಲಿ ಬರೆದಿರುವ ವಿಷಯವನ್ನು ನಾನು ಓದಿರುತ್ತೇನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಕೃಷ್ಣಪ್ಪನವರ ಆರೋಗ್ಯ ಚೆನ್ನಾಗಿತ್ತು. ನಿಪಿ 2 ರಲ್ಲಿ ಕೃಷ್ಣಪ್ಪನವರ ಆರೋಗ್ಯ ಚೆನ್ನಾಗಿರಲಿಲ್ಲ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಿಲ್ ನಲ್ಲಿ ಕೃಷ್ಣಪ್ಪನವರ ಆರೋಗ್ಯ ಚೆನ್ನಾಗಿರುತ್ತದೆ ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಕೃಷ್ಣಪ್ಪನವರು ಆ ದಿನ ನಾನು ವಿಲ್ ನ್ನು ಓದಿರುತ್ತೇನೆ ಅದನ್ನು ಸಹಿ ಮಾಡಿ ಎಂದು ನನಗೆ ಹೇಳಿದ್ದ ಕಾರಣ ನಾನು ಸದರಿ ವಿಲ್ ನಲ್ಲಿ ಕೃಷ್ಣಪ್ಪನವರಿಗೆ ಓದಿ ಹೇಳಿರುವುದಿಲ್ಲ. ನನ್ನ ಮುಂದೆ ಕೃಷ್ಣಪ್ಪನವರಿಗೆ ವಕೀಲರು ವಿಲ್ ನಲ್ಲಿ ಇರುವ ಅಂಶಗಳನ್ನು ಓದಿ ಹೇಳಿರುತ್ತಾರೆ.ಸದರಿ ವಿಲ್ ನ್ನು ವಕೀಲರು ಓದಿದಾಗ ಮಧ್ಯಾಹ್ನದ ಸಮಯವಾಗಿತ್ತು. ವಕೀಲರು ಸದರಿ ವಿಲ್ ನ್ನು 15 ರಿಂದ 20 ನಿಮಿಷ ಓದಿ ಹೇಳಿರುತ್ತಾರೆ. ವಿಲ್ ನ್ನು ಓದಿ ಹೇಳುವ ಕಾಲಕ್ಕೆ ನಾನು ಕೃಷ್ಣಪ್ಪನವರ ಪಕ್ಕದಲ್ಲಿದ್ದೆ. ನನಗೂ ಮತ್ತು ಕೃಷ್ಣಪ್ಪನವರಿಗೂ ಎಷ್ಟು ಅಂತರ ಇತ್ತು ಎಂದರೆ ಸಾಕ್ಷಿಯು ನಾನು ಪಕ್ಕದಲ್ಲೆ ಇದ್ದೆ ಎಂದು ನುಡಿಯುತ್ತಾರೆ. ವಿಲ್ ನಲ್ಲಿ ಇರುವ ಸ.ನಂ., ವಿಸ್ತೀರ್ಣ ಮತ್ತು ಚೆಕ್ ಬಂದಿ ಈಗ ನನಗೆ ನೆನಪಿರುವುದಿಲ್ಲ.

ನಾನು ಪತ್ರ ಬರಹಗಾರರ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಪತ್ರವಾಗಿದ್ದು, ಅದನ್ನು ಸಾಕ್ಷಿ **ತನ್ನ ಡಿಡ್ ರೈಟರ್ ಲೈಸೆನ್ಸ ಗೆ ಸಂಬಂಧಪಟ್ಟ ಪತ್ರ ಎಂದು ಗುರುತಿಸಿದ ಮೇರೆಗೆ ಅದನ್ನು ನಿ ಡಿ 21 ಎಂದು ಗುರುತಿಸಲಾಯಿತು.** ನಾನು ಡಿಡ್ ರೈಟರ್ ಕೆಲಸ ಬಿಟ್ಟ ನಂತರ ಟೀಚರ್ ಆಗಿ ಕೆಲಸಕ್ಕೆ ಸೇರಿಕೊಂಡಿರುತ್ತೇನೆ. ನಾನು ಶಿಕ್ಷಕನಾಗಿ 1985 ರಿಂದ 2014 ರ ವರೆಗೂ ಕೆಲಸ ನಿರ್ವಹಿಸಿರುತ್ತೇನೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ನನ್ನ ವಕೀಲರು ತಯಾರು ಮಾಡಿರುತ್ತಾರೆ.ಸದರಿ ಪ್ರಮಾಣಪತ್ರವನ್ನು ದಿನಾಂಕ ಃ 20.08.2024 ರಂದು ತಯಾರು ಮಾಡಿರುತ್ತಾರೆ . ಸದರಿ ಪ್ರಮಾಣಪತ್ರವನ್ನು ಸಂಜೆಯ ಮಯದಲ್ಲಿ ತಯಾರು ಮಾಡಿರುತ್ತಾರೆ. ಅದರಲ್ಲಿ ಬರೆದಿರುವ ವಿಷಯಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಾನು ಬಿಕಲಂ ಹಾಕುವುದು ಮತ್ತು ಪತ್ರ ಬರೆಯುವುದನ್ನು ಸುಮಾರು ಮಾಡಿರುತ್ತೇನೆ ಎಂದರೆ ಸರಿ. ನಾನು

ತುಂಬಾ ನುರಿತ ಅನುಭವಿಡಿಡ್ ರೈಟರ್ ಎಂದರೆ ಸಾಕ್ಷಿಯು ನಾನು ಕೆಲಸಕ್ಕೆ ಸೇರುವ ಮುಂಚೆ ಪತ್ರ ಬರಹಗಾರನಾಗಿದ್ದೆ ಎಂದು ನುಡಿಯುತ್ತಾರೆ. ನಾನು ಸುಮಾರು 1000 ಪತ್ರಗಳಲ್ಲಿ ಪತ್ರ ಬರಹಗಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಸುಮಾರು ಪತ್ರಗಳನ್ನು ಬರೆದಿರುತ್ತೇನೆ, ಅದರಲ್ಲಿ ನನ್ನ ಸಹಿ ಇರುತ್ತದೆ, ಆದರೆ ಅದರ ಲೆಕ್ಕ ನಾನು ಹೇಳಲು ಆಗುವುದಿಲ್ಲ. ನಾನು ಸುಮಾರು ಕಲಾಪಗಳಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸಾಕ್ಷಿಯು ನಾನು ಎರಡು ಕಲಾಪಗಳಲ್ಲಿ ಸಾಕ್ಷ್ಯ ನುಡಿದಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸಾಕ್ಷಿಗಳಾದ ರವಿಕುಮಾರ್ ಮತ್ತು ನಂಜೇಗೌಡರ ಪರಿಚಯ ಇರುವುದಿಲ್ಲ. ಅವರು ಯಾವ ಊರಿನವರು ಮತ್ತು ವಿಲ್ ನೋಂದಣಿ ಮಾಡಿಸುವಾಗ ಅವರು ಯಾವ ಕಾರಣಕ್ಕೆ ಭಾಗವಹಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕ : 25.11.2006 ಮತ್ತು 03.12.2008 ರಂದು ನನ್ನ ಮುಂದೆ ಸದರಿ ಸಾಕ್ಷಿಗಳು ಹಾಜರಿರಲಿಲ್ಲ. ಸದರಿ ಎರಡು ದಿನ ಅವರನ್ನು ಉಪ ನೋಂದಾಣಾಧಿಕಾರಿಗಳ ಕಚೇರಿಯ ಕಾಂಪೌಂಡ್ ನಲ್ಲಿ ನೋಡಿರುತ್ತೀರಾ ಎಂದರೆ ಸಾಕ್ಷಿಯು ಆ ದಿನ ನಾನು ಸಹಿ ಮಾಡಿರುತ್ತೇನೆ, ಆದರೆ ಅವರನ್ನು ಖುದ್ದಾಗಿ ನೋಡಿರುವುದಿಲ್ಲ. ನಾನು ಕೃಷ್ಣಪ್ಪ ನವರನ್ನು ದಿನಾಂಕ : 25.11.2006 ಮತ್ತು 03.12.2008 ರಂದು ಕೇವಲ ಅವರ ಸಹಿಯನ್ನು ಗುರುತಿಸಿರುತ್ತೇನೆ ಹೊರತು ಬೇರೆ ಏನು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಕೃಷ್ಣಪ್ಪ ನವರು ವಿಲ್ ಮಾಡಿರುತ್ತಾರೆ , ಅದರಲ್ಲಿ ಸಹಿ ಮಾಡಿರುತ್ತಾರೆ ಮತ್ತು ನಾನು ಅವರು ಸಹಿ ಮಾಡಿರುವುದನ್ನು ಗುರುತಿಸಿರುತ್ತೇನೆ. ನಾನು ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರವನ್ನು ಸಲಿಲಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**